ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸಿನಿಂದ.

ಇಸ್ತಿಹಾರ್.

ತಾರೀಖು 23ನೆ ಮಾರ್ಚಿ 1907.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸಾದರಾದ 29—6—1901ನೆ ಮಾರ್ಕಾ 17691—L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮೂಲಕ ಸದರಿ ಮಲ್ಲೇಶ್ವರ ಎಕ್ಸ್‌ಟೆಂಶನ್ ಪ್ರದೇಶಕ್ಕೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನ 1907ನೆ ಇಸವಿ ಏಪ್ರಿಲ್ ತಾ॥ 2ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿರುತ್ತಾಗಿ ಹರಾಜಿನಲ್ಲಿ ಛಡಿ ಸವಾಲ್ ಮೂಲಕ ಪಡದುಕೊಳ್ಳಲು ಇಚ್ಛಿಸ್ಪವ್ಯರು ಅದೇ ತಾರೀಖು ಪ್ರಾತಃಕಾಲ 7½ ಘಂಟೆಲುಗಾಯಿತು ಆವಾಯ ಸೈಟುಗಳ ಬಳಿ ಹಾಜರಾದ್ದು ಛಡಿ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ವಳಪಟ್ಟು ಛಡಿಸವಾಲ್‌ನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರ್ತಿಸದೆ ನಿಲ್ಲುವ ಸೈಟುಗಳನ್ನು ಮೂರು ದಿವಸಗಳಲ್ಲಿ ಅದೇ ಟೈಮಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಮಲ್ಲೇಶ್ವರ ಎಕ್ಸ್‌ಟೆಂಶನ್.		ಅಳತೆ	ಹರಾಜು ತಾರೀಖು.
ಹಿಂದೂ ಬ್ಲಾಕ್	.... 2—110—111—358—359 360—373—374—375 377 & 378	100 × 30	2—4—07
ಬ್ರಾಹ್ಮಣ ಬ್ಲಾಕ್	... 107 & 108	...116 × 30	

1. ಹರಾಜು ಬೈದಾದ ಕೂಡ್ಲೆ ಛಡಿ ಸವಾಲ್ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದಾಸರಾ ಹರಾಜು ಮಾಡಿಸಿ ಒರುವ ಲುಕ್ಸಾನಿಗೆ ಮೊದಲು ಛಡಿಸವಾಲ್‌ದಾರನ್ನ ಗುರುವಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗೆಂದರೆ ಛಡಿಸವಾಲ್ ಮೊಬಲಗ್ಗೆ ನಿರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡಿಸವಾಲ್‌ದಾರ ಹಾಜರಿಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡನಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದಾಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡಿಸವಾಲ್‌ದಾರನ್ನ ಗುರುವಾಡಲ್ಪಡುತ್ತೆ.

3. ಹರಾಜು ಮುಂಜೂರಾದ ಕೂಡ್ಲೆ ಸೈಟನ್ನ ಛಡಿಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳತಕ್ಕದ್ದು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಮುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿನು ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾ ವಗೈರೆ ಸ್ಯಾನಿಟೆರಿ ಇಂಜನಿಯರವರಂಥ ಮುಂಜೂರುಗುವ ವರಿಗೂ ಯಾವಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಶೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಗೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೊಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟೆರಿ ಇಂಜನಿಯರವರು ಆಪ್ತಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಬಂದು ಮತ್ತ, ಪಣ ಅಥವಾ ಜಾತಿಯವರಿಗೆ ನಿರ್ದಿಷ್ಟಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬಾಹ ಮೂಲಕವಾದ ಒಪ್ಪಿತದ ಮೇಲೆ ಡಿಪ್ಯುಟಿ ಕಮಿಷರ್‌ರವರು ಮುಂಜೂರ್ಮಾಡಿದ ಹೊರ್ತು ಇತರ ಮತ್ತ, ಪಣ ಯಾ ಜಾತಿಯವರು ವಾಸ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟೆರಿ ಇಂಜನಿಯರವರ ಆಪ್ತಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗಬೆಳಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪು ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನ ಹಿಂತುರ್ತೇದಾರನು ಮುಶ್ಯವ ವಿಚಾರಣೆಯೂ ಇಲ್ಲದೆ ಹೋಗಲುಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪು ನಡದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ತೀರಿಸಿಕೊಂಡ ಬಳಿಕ ಹಿಂತುರ್ತೇದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹಾರ ದ್ರವ್ಯಕ್ಕೂ ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಾಡಿಗೂ ಹಕ್ಕುದಾರನಾಗುವದಿಲ್ಲ.

ಎಂ. ಜೆ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್.